# ಹಳಿಯಾಳದಲ್ಲಿ ನಂದಿ ರಥಯಾತ್ರೆಗೆ ಭವ್ಯ ಸ್ವಾಗತ



e-ಉತ್ತರ ಕನ್ನಡ ವರದಿ ಸಂದೇಶ್ ಎಸ್.ಜೈನ್

**ಹಳಿಯಾಳ :** ಯಲ್ಲಾಪುರದಿಂದ ಹಳಿಯಾಳ ಪಟ್ಟಣಕ್ಕೆ ಬುಧವಾರ ಆಗಮಿಸಿದ ನಂದಿ ರಥಯಾತ್ರೆಗೆ ಹಳಿಯಾಳ ಪಟ್ಟಣದ ವಿಡಿಐಟಿ ಇಂಜಿನಿಯರಿಂಗ್ ಕಾಲೇಜ್ ಮುಂಭಾಗದಲ್ಲಿ ವಾಡಕರಿ ಭಜನಾ ತಂಡದ ಭಜನೆಯ ಮೂಲಕ ಭವ್ಯ ಸ್ವಾಗತವನ್ನು ಕೋರಲಾಯಿತು.

ಈ ಸಂದರ್ಭದಲ್ಲಿ ನಂದಿ ಗೋ ರಥಯಾತ್ರೆಗೆ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಗೋ ರಕ್ಷಕ ಬಿ.ಎಚ್ ಶಿವಪ್ಪಾ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾದ್ಯಕ್ಷರಾದ ಉದಯ ಶ್ರಿಕಾಂತ ಹೂಲಿ, ಕರ್ನಾಟಕ ರಕ್ಷಣಾ ವೇದಿಕೆ ಹಳಿಯಾಳ ಘಟಕದ ಅಧ್ಯಕ್ಷರಾದ ಬಸವರಾಜ ಬೆಂಡಿಗೇರಿಮಠ, ವಿಡಿಐಟಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯರಾದ ಡಾ. ವಾದಿರಾಜ ಕುಲಕರ್ಣಿ, ಪ್ರಮುಖರಾದ ವಿನೋದ್ ಗಿಂಡೆ, ಲಕ್ಷ್ಮಣ್ ಪೆಡ್ನೆಕರ, ರಾಮು ಹಗರಿ, ಇಂಜಿನಿಯರಿಂಗ್ ಕಾಲೇಜಿನ ಸಿಬ್ಬಂದಿಗಳು, ಕರ್ನಾಟಕ ರಕ್ಷಣಾ ವೇದಿಕೆಯ ಪದಾಧಿಕಾರಿಗಳು ಕಾರ್ಯಕರ್ತರು ಹಾಗೂ ಗೋಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ನಂತರ ಭವ್ಯ ಮೆರವಣಿಗೆಯ ಮೂಲಕ ಅಳ್ನಾವರಕ್ಕೆ ಬೀಳ್ಕೊಡಲಾಯಿತು.